# ಅಪ್ಪ

## ಬೆರಳ ತುದಿಯ ಭರವಸೆ



**ಅಮ್ಮ ಆಸರೆಯಾದರೆ, ಅಪ್ಪ ಭರವಸೆ. ಆದರೆ, ಸಾಮಾಜಿಕ ಭಾವಕೋಶದಲ್ಲಿ ಅಮ್ಮನಿಗೆ ಸಿಕ್ಕಷ್ಟು ಮನ್ನಣೆ ಅಪ್ಪನಿಗೆ ಸಿಕ್ಕಿಲ್ಲ. ಪ್ರೀತಿಯಲ್ಲಿ ಎರಡನೆಯವನಾದರೂ ಅಪ್ಪನ ವಾತ್ಸಲ್ಯ ಎರಡನೆಯದೇನೂ ಅಲ್ಲ. ಅಮ್ಮನಂತೆ 'ಕಾಂಗರೂ ಕಾಳಜಿ'ಯನ್ನು ಮಕ್ಕಳಿಗೆ ಅಪ್ಪನೂ ನೀಡಬಲ್ಲ.**

■ ಡಾ. ಕೆ.ಬಿ. ರಂಗಸ್ವಾಮಿ

ಕೊರೊನಾ ತನ್ನ ಹಾವಳಿಯನ್ನು ಶುರುವಿಟ್ಟುಕೊಳ್ಳುವುದಕ್ಕೂ ಮುನ್ನ ಒಮ್ಮೆ ಕಾರ್ಯನಿಮಿತ್ತ ಚಿತ್ರದುರ್ಗಕ್ಕೆ ಹೋಗಿದ್ದೆ. ಸಂಜೆ ಹಿಂತಿರುಗುವಾಗ, ಎರಡು ದಿನ ಒಟ್ಟೊಟ್ಟಿಗೆ ರಜೆ ಇದ್ದುದರಿಂದಲೋ ಏನೋ ಬೆಂಗಳೂರು ಕಡೆಗೆ ಹೋಗುವ ಬಸ್ಸುಗಳೆಲ್ಲವೂ ಕಿಕ್ಕಿರಿದು ತುಂಬಿದ್ದವು. ಕಾಲಿಡಲೂ ಜಾಗವಿಲ್ಲದಂತೆ ಜನ ಒತ್ತೊತ್ತಾಗಿ ನಿಂತು ಪ್ರಯಾಣಿಸುತ್ತಿದ್ದರು. ಅಂತೂ ಇಂತೂ ಏಳರ ಸುಮಾರಿಗೆ ಹರಸಾಹಸಪಟ್ಟು ಒಂದು ಬಸ್ಸಿನೊಳಕ್ಕೆ ನುಸುಳಿಕೊಳ್ಳುವಲ್ಲಿ ಸಫಲನಾದೆ. ಪೂರ್ತಿ ಹಿಂದಿನ ಸೀಟಿನಲ್ಲಿ ಕುಳಿತುಕೊಳ್ಳಲು ಜಾಗವೂ ಸಿಕ್ಕಿಬಿಟ್ಟಿತು. ಉಸ್ಸೆಂದು ನಿಟ್ಟುಸಿರುಬಿಟ್ಟು ಕುಳಿತುಕೊಂಡೆ.

ಪಕ್ಕದಲ್ಲಿ ಕುಳಿತಿದ್ದ ಸುಮಾರು 25 ವರ್ಷದ ಆಸುಪಾಸಿನ ಯುವಕನೊಬ್ಬ ಎರಡು ಪುಟಾಣಿಗಳನ್ನು, ತಾಯಿಕೋತಿ ತನ್ನ ಮರಿಗಳನ್ನು ಅವುಚಿಕೊಳ್ಳುವಂತೆ ಎದೆಯ ಎರಡೂ ಬದಿ ಅವುಚಿಕೊಂಡು ಕುಳಿತಿದ್ದ. ಅವೆರಡೂ ಹೆಚ್ಚೂಕಡಿಮೆ ಒಂದೇ ವಯಸ್ಸಿನವರಂತೆ ಕಾಣುತ್ತಿದ್ದವು. ಆ ಇಬ್ಬರದೂ ಥೇಟ್ ಕೋತಿಮರಿಗಳಂತೆಯೇ ಚೇಷ್ಟೆ. ಆ ಯುವಕನಿಗೆ ಮುಖ ಪರಚುವುದು, ಹೊಡೆಯುವುದು, ಗುದ್ದುವುದು, ತಾವು ತಾವೇ ತಬ್ಬಿಕೊಳ್ಳುವುದು, ಮುದ್ದು ಮಾಡುವುದು, ಕೂಗುವುದು, ಕಿರಿಚುವುದು ಒಂದೇ ಎರಡೇ... ಆ ವ್ಯಕ್ತಿಯೋ ಅತ್ಯಂತ ತಾಳ್ಮೆಯಿಂದ ಇಬ್ಬರನ್ನೂ ಸಂಭಾಳಿಸುತ್ತಿದ್ದ.

ಕುತೂಹಲ ತಡೆಯಲಾರದೆ ನಾನು 'ಅವಳಿ ಜವಳಿ ಮಕ್ಕಳಾ?' ಎಂದು ಪ್ರಶ್ನಿಸಿದೆ. 'ಇಲ್ಲ. ಒಂದು ವರ್ಷ ವ್ಯತ್ಯಾಸ' ಎಂದ. ನಯನ ಎಂಬ ಹೆಸರಿನ ಹೆಣ್ಣು ಮಗುವಿಗೆ ಎರಡೂವರೆ ವರ್ಷಗಳಾಗಿದ್ದರೆ, ಅಜಯ್ ಎಂಬ ಹೆಸರಿನ ಗಂಡು ಮಗು ಅವಳಿಗಿಂತ ಒಂದು ವರ್ಷ ಚಿಕ್ಕವನಾಗಿದ್ದ. ನೋಡಲು ಮಾತ್ರ ಇಬ್ಬರೂ ಒಂದೇ ವಯಸ್ಸಿನವರಂತೆ ಕಾಣುತ್ತಿದ್ದರು. ನಾನೂ ಸಹ ಅವರಿಬ್ಬರನ್ನು ಒಂದಿಷ್ಟು ರೇಗಿಸುತ್ತಾ, ತಮಾಷೆ ಮಾಡುತ್ತಾ ಕುಳಿತೆ.

'ಜೊತೆಯಲ್ಲಿ ಇವರ ತಾಯಿ ಬಂದಿಲ್ಲವಾ?' ಎಂದು ಕೇಳಿದಾಗ ಆತ ಹೇಳಿದ್ದನ್ನು ಕೇಳಿ ನನಗೆ ನಿಜಕ್ಕೂ ಅಚ್ಚರಿಯೆನಿಸಿಬಿಟ್ಟಿತು. 'ಇಲ್ಲ ಸಾರ್. ಮಂಗಳೂರಿನಿಂದ ಇವರನ್ನು ಕರೆತರುವಷ್ಟರಲ್ಲಿ ಸಾಕುಸಾಕಾಯಿತು' ಎಂದ. 'ನಿಮ್ಮದು ಮಂಗಳೂರಾ?' ಎಂದು ಕೇಳಿದೆ. 'ಅಲ್ಲ ಸರ್; ಮಂಗಳೂರಿನಲ್ಲಿರುವ ನಮ್ಮ ಅಕ್ಕನ ಬಳಿ ಇವರಿಬ್ಬರನ್ನೂ ಬಿಟ್ಟಿದ್ದೆ. ಆಕೆಗೆ ಮಕ್ಕಳಿಲ್ಲದ ಕಾರಣ ಇವರನ್ನು ಅಲ್ಲಿ ಬಿಡುವಂತೆ ಕೇಳಿಕೊಂಡಿದ್ದಳು' ಎಂದ. 'ಇವರ ತಾಯಿ ಎಲ್ಲಿದ್ದಾರೆ?' ಎಂದು ನಾನು ಕೇಳಿದಾಗ, 'ನಾವಿಬ್ಬರೂ ಬೆಂಗಳೂರಿನಲ್ಲಿ ಕೆಲಸ ಮಾಡುತ್ತೇವೆ ಸರ್. ಇವರನ್ನು ಬಿಟ್ಟಿರಲಾಗುತ್ತಿಲ್ಲ ಎಂದು ಇವರ ತಾಯಿ ಈಗ ಕೆಲಸ ಬಿಟ್ಟು ಅವಳ ತವರೂರಾದ ಹಿರಿಯೂರಿನಲ್ಲಿದ್ದಾಳೆ. ಅವಳ ಬಳಿ ಇವರನ್ನು ಬಿಟ್ಟುಹೋಗಲು ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೇನೆ' ಎಂದ.



**ಜೂನ್ 20 ಅಪ್ಪಂದಿರ ದಿನ**

ಮಕ್ಕಳಿಬ್ಬರ ತರಲೆ, ತುಂಟಾಟಗಳು ಮುಂದುವರಿದೇ ಇದ್ದವು. ಅಷ್ಟರಲ್ಲಾಗಲೇ ಹಿರಿಯೂರು ಸಮೀಪಿಸಿದ್ದರಿಂದ ಆ ಎರಡೂ ಪುಟಾಣಿಗಳನ್ನು ಎದೆಗವುಚಿಕೊಂಡು ಪ್ರಯಾಸಪಟ್ಟು ಕೆಳಗಿಳಿದ. ಆ ಇಬ್ಬರೂ ಮಕ್ಕಳನ್ನು ಸಂಭಾಳಿಸಿಕೊಂಡು, ಅವರಿಬ್ಬರ ಚೇಷ್ಟೆಗಳನ್ನು ಸಹಿಸಿಕೊಂಡು, ಒಂದಿನಿತೂ ಬೇಸರಿಸಿಕೊಳ್ಳದೆ, ಗಂಟೆಗಟ್ಟಲೆ ಪ್ರಯಾಣಿಸಿ ಮಂಗಳೂರಿನಿಂದ ಕರೆತಂದಿದ್ದ ಆತನಲ್ಲಿದ್ದ ತಂದೆತನಕ್ಕೆ ಮನಸ್ಸಿನಲ್ಲೇ 'ಹ್ಯಾಟ್ಸ್ ಆಫ್' ಎಂದೆ.

ಸಮಾಜ ಯಾವಾಗಲೂ ತಾಯಿಗೆ ಹೆಚ್ಚಿನ ಮಹತ್ವ ನೀಡುತ್ತದೆ. ಅದು ಸರಿ ಕೂಡ. ನವ ಮಾಸಗಳ ಕಾಲ ಹೊತ್ತು, ಹೆತ್ತು, ಎದೆಹಾಲುಣಿಸಿ, ಕೈತುತ್ತು ನೀಡಿ, ಮಮತೆಯ ಮಹಾಪೂರವನ್ನೇ ಹರಿಸಿ ಬೆಳೆಸುವ ತಾಯಿಗೆ ತಾಯಿಯೇ ಸಾಟಿ. ಆದರೆ ಜನ್ಮ ಕೊಟ್ಟ ತಂದೆಯ ಪಾತ್ರವೇನೂ ಕಡಿಮೆಯಾದುದಲ್ಲ. ಪ್ರೀತಿಯ ಸಾಗರವನ್ನೇ ಎದೆಯಲ್ಲಿ ಅವಿತಿಟ್ಟುಕೊಂಡು, ತನಗೆಷ್ಟೇ